doc-581
T.P-2

Reg No B G 155 ಶ್ರೀ 2 ಪೈಸೆ 6 11 72

In The State **First Golden Jubilee Celebrated Paper 'Satyavadi' daily, Mysore 4**

ಸತ್ಯವಾದಿ

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 7-11-1972 ಮಂಗಳವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ	ಶ್ರೀ ಕೆ. ರಾಮರಾವ್, ಮೈಸೂರು	ಸಂಗೀತ
7-00 ರಿಂದ 9-30 ರಾತ್ರಿ	ಸಿವಿಲ್ ಪೋಲೀಸ್ ನೌಕರರ ಸಂಘ, ಮೈಸೂರು	ನಾಟಕ "ಸಾಹುಕಾರ"

●

ಜೀವನರಾಯನಕಟ್ಟೆ

6 ರಿಂದ 7 ಸಂಜೆ	ಶ್ರೀಮತಿ ಹೆಚ್. ಶಾರದಮ್ಮ, ಮೈಸೂರು	ಸಂಗೀತ
7 ರಿಂದ 8 ರಾತ್ರಿ	ಕುಮಾರಿ ಜಿ ಭಾಗ್ಯಲಕ್ಷ್ಮಿ, ಮೈಸೂರು	ಸಂಗೀತ
8 ರಿಂದ 9-00	ಶ್ರೀಮತಿ ಆರ್. ವೈದೇಹಿ, ಮೈಸೂರು,	ಸಂಗೀತ

ವುಡ್‌ಲಾಂಡ್ಸ್ ಅಮೋಘ 6 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಆತ್ಮನೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೂರ್ವ 4 ನೇ ವಾರ ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

Edited Printedand Published by Dharmapracharanirata
M S Krishna Rao-(-Propretor) at the Satyavad. Press
Chamarajapuram Mysore

ನೂತನ ದಂಪತಿಗಳ ಬಲಿ

ಖಟ್ಮಂಡು — ಪಟ್ಟನು ನೇಪಾಳದ ಟೆರೈ ಪಟ್ಟಣದಲ್ಲಿ ನೂತನವಾಗಿ ವಿವಾಹವಾದ ಯೌವನ ದಂಪತಿಗಳನ್ನು ಏನೋ ಮತ ಸಂಬಂಧದ ಆಚರಣೆಯಲ್ಲಿ ಅವರ ತಂದೆ ತಾಯಿಗಳ ಒಪ್ಪಿತದಂತೆ ಅವರ ಕತ್ತು ಗಳನ್ನು ಒಬ್ಬ ರೈತನು ಕುಡುಗೋಲಿನಿಂದ ಕತ್ತರಿಸಿಹಾಕಿದನು – ಅವರಿಲ್ಲರನ್ನೂ ಕೊಲೆ ಆಪಾದನೆಗೆ ಪಕ್ಕಗಿರಿ ಮಾಡಲಾಗಿದೆ.

★

ವಿಷಯಿಂದ ಕೆಲಸ ಹೋಯಿತು

ಮಿಯಾಮಿ— ಇಲ್ಲಿ ಅತಿ ಹೆಚ್ಚಿನ ಮೆಚ್ಚಿಗೆ ಪಡೆದಿದ್ದ 26 ವರ್ಷದ ಡ್ಯಾನಿಯಲ್ ಜೆಲ್ ಎಂಬ ಪೋಲೀಸು ನೌಕರನು ತನ್ನ ವಿಷಯಲ್ಲಿ ಅರ್ಧ ಅಂಗುಲದಷ್ಟು ಕತ್ತರಿಸಲು ತಿರಸ್ಕರಿಸಿದ್ದರಿಂದ ಅವನನ್ನು ಕೆಲಸದಿಂದ ಡಿಸ್‌ಮಿಸ್ ಮಾಡಲಾಗಿದೆ – ವಿಷಯು ಅವನ ಬಾಯಿಯ ಮೂಲೆಗಳ ಮುಂದಕ್ಕೆ ಅರ್ಧ ಅಂಗುಲದಷ್ಟಿದೆ.

○

ಏಷ್ಯಾ ಸಿಂಗ್

ನವದೆಹಲಿ— ಕಳೆದ ಏಪ್ರಿಲ್ 3 ರಂದು ಏಷ್ಯಾ ವಾಣಿಜ್ಯ ಮೇಳದ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಮಾಧೋ ಸಿಂಗ್‌ಗೆ ಅವನ ಪತ್ನಿ ಅಮರಜಿತ ಗಂಡು ಮಗುವಿಗೆ ಜನ್ಮವಿತ್ತ ವಾರ್ತೆ ಬಂದಿತು : ಮಗುವಿಗೆ ಏಷ್ಯಾ ಸಿಂಗ್ ಎಂದು ನಾಮಕರಣ ಮಾಡಲಾಗಿದೆ.

★

ಕಾವೇರಿ ನೀರು

ಬೆಂಗಳೂರು— ಕಾವೇರಿ ನೀರು ಸಮಸ್ಯೆ ಬಗ್ಗೆ ಅಂತಿಮ ಕಂಡುಹಿಡಿಯಲು ನೇಮಿಸಲಾಗಿರುವ ಸಮಿತಿಯವರೊಂದಿಗೆ ಚರ್ಚಿಸಲು ಮೈಸೂರು ಅಧಿಕಾರಿಗಳ ತಂಡವು ಕ್ಷಿಪ್ರದಲ್ಲೇ ದೆಹಲಿಗೆ ಹೋಗಲಿದೆ.

★

ಡಿಎಂಕೆ ಸರ್ಕಾರದ ವಿರುದ್ಧ

ಮದ್ರಾಸು— ಡಿಎಂಕೆ ಮಂತ್ರಿಮಂಡಲದ ಮೇಲೆ ಭ್ರಷ್ಟಾಚಾರ ಆರೋಪದ ಪಟ್ಟಿಯನ್ನು ಅಣ್ಣಾ ಡಿಎಂಕೆ ಪಾರ್ಟಿ ಸ್ಥಾಪಕ–ನಾಯಕ ಎಂ. ಜಿ. ಆರ್. ರವರು ರಾಷ್ಟ್ರಾಧ್ಯಕ್ಷರಿಗೆ ಅರ್ಪಿಸಲಿರುವರು

○

ಗೀತೋಪದೇಶ ಗೋಪುರ

ತಿರುವನಂತಪುರಂ— ತಿರುವಾಂಕೂರು ದೇವಸ್ಥಾನ ಇಲಾಖೆ ಸ್ಥಾಪನೆಯ ಶತಮಾನೋತ್ಸವ ಸಂಬಂಧವಾಗಿ, ನಮ್ಬುತಂಕಾರದಲ್ಲಿರುವ ಪ್ರಖ್ಯಾತ ಶ್ರೀ ಕೃಷ್ಣ ದೇವಸ್ಥಾನದ ಎದುರಿಗೆ ನಿರ್ಮಿಸಲಾಗಿರುವ ಶ್ರೀ ಗೀತೋಪದೇಶ ಗೋಪುರವನ್ನು ತಮಿಳುನಾಡು ಗೌರ್ನರರು ಉದ್ಘಾಟಿಸಿದರು.

ಗರೀಬಿ ಹತಾವೋ ದಿನಾಚರಣೆ

ನವದೆಹಲಿ– ಸ್ವಾತಂತ್ರ್ಯದ ರಜತೋತ್ಸವ ವರ್ಷದ ಸಮಾರಂಭಗಳಲ್ಲಿ ತಾ || 19 ರಂದು ಗರೀಬಿ ಹತಾವೋ ದಿನವಾಗಿ ಆಚರಿಸಲಾಗುವುದು.

★

ಸಕ್ಕರೆ ಬೆಲೆ

ನವದೆಹಲಿ— ಲೆವಿ ಸಕ್ಕರೆ ಬೆಲೆ ಏರಿಸಲ್ಪಡಬಹುದೆಂದು ಹೇಳಲಾಗಿದೆ.

○

ಕರಂಜಾ ಪ್ರಾಜೆಕ್ಟ್

ಬೆಂಗಳೂರು– ಈಗಾಗಲೇ ಕೆಲಸ ನಡೆಯುತ್ತಿರುವ ಕರಂಜಾಪ್ರಾಜೆಕ್ಟು ಬೀದರಿನ ಅಭ್ಯುದಯಕ್ಕೆ ಪ್ರಾಮುಖ್ಯವಾಗಿದೆಯೆಂದೂ, 1980 ರ ಹೊತ್ತಿಗೆ ಮುಗಿಯುವುದೆಂದೂ ಪ್ರಕಟವಾಗಿದೆ – ಕರಂಜವು ಗೋದಾವರಿಯ ಹಿರಿಯ ಉಪನದಿಯಾದ ಮಂಜ್ರದ ಉಪನದಿಯಾಗಿದೆ.

★

ಎಚ್ಚರಿಕೆಯಿರಲಿ

ಬೆಂಗಳೂರು— ಮೈಸೂರು–ಕೇರಳ ಗಡಿಯಲ್ಲಿ ಆಕ್ಕಿ ಆಕ್ಕಮ ಸಹಗಾಣಿಕೆಯಾಗದಂತೆ ಜನರು ನೋಡಿಕೊಳ್ಳಬೇಕೆಂದು ಸಹಕಾರ ಮಂತ್ರಿ ಶ್ರೀ ಶಂಕರ ಅಳ್ವಾರವರು ಎಚ್ಚರಿಕೆ ನೀಡಿರುವರು.

●

ಸರ್ಕಾರ ಸಹಾಯಮಾಡಲು ಸಿದ್ಧ

ಬೆಂಗಳೂರು— ಅಭಾವಪೀಡಿತ ಭಾಗಗಳಲ್ಲಿ ಜನರು ದನಗಳ ಮೇವಿನ ಕೇಂದ್ರಗಳನ್ನು ಸ್ಥಾಪಿಸಿದರೆ, ಸರ್ಕಾರವು ಮೇವು ಸರಬರಾಜು ಮಾಡಲು ಸಿದ್ಧವೆಂದು ವಾರ್ತಾ ಮತ್ತು ಯೋಜನಾ ಸ್ಟೇಟ್ ಮಂತ್ರಿ ಶ್ರೀ ದೇವೇಂದ್ರಪ್ಪ ಘೋಷಿಸಿರುವರು

○

ವಿದ್ಯಾರ್ಥಿಗಳು ಹೊರದೂಡಲ್ಪಟ್ಟರು

ತುಮಕೂರು– ಅಕ್ಟೋಬರು 20 ರಂದು ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ದುಷ್ಕೃತ್ಯ ನಡೆಸಿದ 16 ವಿದ್ಯಾರ್ಥಿಗಳನ್ನು ಹೊರದೂಡಲಾಯಿತು.

★

ಕೋತಿಯಿಂದಾದ ಅನಾಹುತ

ರಾಯಚೋಟಿ— ಒಂದು ಮನೆಗೆ ಒಂದು ಕೋತಿ ನುಗ್ಗಿತು : ತಾಯಿ ಅಡಿಗೆ ಮನೆಯಲ್ಲಿ ಕೆಲಸದಲ್ಲಿ ನಿರತಳಾಗಿದ್ದಳು ; ಹಜಾರದಲ್ಲಿ ಮಲಗಿಸಿದ್ದ ಮಗುವನ್ನು ಕೋತಿ ಎತ್ತಿಕೊಂಡುಹೋಗುತ್ತಿದ್ದಾಗ ಮಧ್ಯೆ ಒಂದು ಭಾವಿಗೆ ಮಗು ಬಿದ್ದು ಬಿಟ್ಟಿತು ; ಇದನ್ನು ಕಂಡ ರಸ್ತೆಯಲ್ಲಿ ಹೋಗುತ್ತಿದ್ದವರು ಮಗುವನ್ನು ಈಜಿಗೆ ತೆಗೆದರು ; ಕೂಡಲೇ ಚಿಕಿತ್ಸೆಮಾಡಲಾಯಿತು ; ಮಗುವು ಬದಕಿಕೊಂಡಿತು.

ಎಂ. ಪಿ. ಗಳಿಗೆ ಆಹ್ವಾನ

ಬೆಂಗಳೂರು— ಪಾರ್ಟಿಯಲ್ಲಿ ಒಡಕುಂಟುಮಾಡಿರುವ ವಾಗ್ವಾದಾಸ್ಪದ ಭೂಸುಧಾರಣೆ (ತಿದ್ದುಪಡಿ) ಮಸೂದೆಯ ಬಗ್ಗೆ ಚರ್ಚಿಸಲು ರಾಜ್ಯದ ಪಾರ್ಲಿಮೆಂಟು ಸದಸ್ಯರನ್ನು ಮುಖ್ಯ ಮಂತ್ರಿಗಳು ಆಹ್ವಾನಿಸಿರುವರು.

○

ರೈಲಿನವರಿಗೆ ಇದೊಂದು ಕೆಲಸ

ವಿಜಯವಾಡ— ಆಂಧ್ರ ಪ್ರದೇಶ ಮುಖ್ಯಮಂತ್ರಿಗಳ ವಿರುದ್ಧ ಚಳವಳಿಗಾರರು ರೈಲ್ವೇ ಕಂಪಾರ್ಟುಮೆಂಟುಗಳಲ್ಲಿ ಬರೆದಿರುವ ಘೋಷಣೆಗಳನ್ನು ಅಳಿಸಲು ಮುಥಿರ ರೈಲ್ವೇ ಸ್ಟೇಷನ್ನಿಗೆ ರೈಲ್ವೇ ಪೇಂಟರುಗಳ ತಂಡವನ್ನು ಕಳಿಸಲಾಗಿದೆ.

★

ಬಂಗ್ಲಾದೇಶದ ಪಾರ್ಲಿಮೆಂಟು

ಬಂಗ್ಲಾದೇಶದ ಭವಿಷ್ಯದ ಪಾರ್ಲಿಮೆಂಟನ್ನು " ಜಾತೀಯ ಸಂಘ್ಸದ್ " ಎಂದು ಕರೆಯಲಾಗುವುದು

●

ಸೆಕ್ಷನ್ 144

ಮುಷ್ಕರಗಳ ಮುಗ್ಗಟ್ಟಿನಲಿ ಸಿಕ್ಕಿರುವ ಕರಾಚಿಯಲ್ಲಿ ಸೆಕ್ಷನ್ 144 ಜಾರಿಯಾಗಿರುವದೆಂದು ಪ್ರಕಟವಾಗಿದೆ.

●

ವಿಜ್ಞಾಪನೆ

ಸ್ವಾತಂತ್ರ್ಯವನ್ನು ಯೋಚಿಸಿದಷೂ ಕಾರಾಗೃಹಗಳ ಗೋಡೆಗಳು ಎತ್ತರವಾಗಿ ಬೆಳೆಯುತ್ತವೆ — ಬಹಹ್ದೂರ್ ಷಾ ಜಫರ್

★

ಜಯತು ಜಯತು ಗೋಕುಲ

ಭಾರತಾಂಬೆಯ ಮಡಿಲ ಮಲ್ಲಿಗೆ
ಜನಕೆ ತಂಪನು ತೂರಿದೆ ॥
ದಿವ್ಯಜ್ಯೋತಿಯು ಮೂಲೆಯಿಲ್ಲದೆ
ಬೆಳಗಿ ಕತ್ತಲ ಹರಿಸಿದೆ ॥
ಧೇನು ತಾಯಿಯ ಸುಃವು ಪುಣ್ಯದಿ
ನಾಡ್ದಿ ಶುಭ ಹಾರೈಸಿದೆ ॥
ತ್ಯಾಗದೇವತೆ ಗೋವಿದುದರದಿ
ಅಮೃತರುರಿ ತೋರೈಸಿದೆ ॥
ಬಾಳದೀವಿಗೆ ಜ್ವಲಿತವಾಗಿದೆ
ಕನಸು ನನಸಿಗೆ ಇಳಿದಿದೆ ॥
ತೋಳತೆಕ್ಕೆಯಿನರಸಿ ವತ್ಸಗು
ತಾಯಬಳಿ ತಾ ಬಂದಿದೆ ॥
ಧರ್ಮದೇವತೆ ತೈರ್ತಳಾಗುತ
ಜಗಕೆ ಸಂತಸ ನೀಡಿದೆ ॥
ಕರ್ಮ ಗತಿಯನು ಬಿಟ್ಟು ದ್ರುತದಿ
ಜಗತಿಪ್ರಗತಿಯನಪ್ಪಿದೆ ॥
ದಿವ್ಯಜ್ಯೋತ್ಸ್ನೆಯು ನಾಡದುಂಬಿದೆ
ಜಯತು ಜಯಜಯ ಗೋಕುಲ ॥
ಭವ್ಯ ಸಂಸ್ಕೃತಿ ಚಿಗುರ ತೊಡಗಿದೆ
ಸೌಮ್ಯವೊಪ್ಪಲ ಏನುಕುಲ ॥

— ವಜ್ರಳ್ಳಿ ಗಣಪತಿಶರ್ಮಾ

ಮೈಸೂರ್ ಸ್ಟೇಟ್ ಲಾಟರಿ

43ನೇ ಡ್ರಾ

ದಸರ-ದೀಪಾವಳಿ ಪ್ರಯುಕ್ತ ವಿಶೇಷ ಕೊಡುಗೆ

ರೂ.22,00,000

ಕ್ಕೂ ಹೆಚ್ಚು ಮೊತ್ತದ ಬಹುಮಾನಗಳು — 10 ಶ್ರೇಣಿಗಳಲ್ಲಿ

ವಿಶೇಷ ಬಹುಮಾನ
ರೂ.5,00,000 ಎಲ್ಲ ಶ್ರೇಣಿಗಳಿಗೂ ಅನ್ವಯಿಸುವಂತೆ

ಮೊದಲ ಬಹುಮಾನ ರೂ.25,000 ಅಥವಾ ಒಂದು ಟ್ರ್ಯಾಕ್ಟರ್ ಪ್ರತಿ ಶ್ರೇಣಿಗೆ

ಎರಡನೇ ಬಹುಮಾನ ರೂ.10,000 ಅಥವಾ ಒಂದು ಪವರ್ ಟಿಲ್ಲರ್ ಪ್ರತಿ ಶ್ರೇಣಿಗೆ

5 ಮೂರನೇ ಬಹುಮಾನಗಳು ರೂ.5,000 ಅಥವಾ ಒಂದು 5 H.P. ಪಂಪ್‌ಸೆಟ್ ಪ್ರತಿ ಶ್ರೇಣಿಗೆ

10 ನಾಲ್ಕನೇ ಬಹುಮಾನಗಳು ರೂ.1,000 ಪ್ರತಿ ಶ್ರೇಣಿಗೆ

20 ಐದನೇ ಬಹುಮಾನಗಳು ರೂ.500 ಪ್ರತಿ ಶ್ರೇಣಿಗೆ

300 ಆರನೇ ಬಹುಮಾನಗಳು ರೂ.100 ಪ್ರತಿ ಶ್ರೇಣಿಗೆ

500 ಏಳನೇ ಬಹುಮಾನಗಳು ರೂ.50 ಪ್ರತಿ ಶ್ರೇಣಿಗೆ

ಡ್ರಾ ದಿನಾಂಕ 19-11-1972 ಪ್ರತಿ ಟಿಕೆಟ್ಟಿಗೆ 1 ರೂ. ಮಾತ್ರ

3 ಲಕ್ಷ ರೂಪಾಯಿಗಳಿಗೂ ಹೆಚ್ಚು ಮೊತ್ತದ 6742 ಸಮಾಧಾನ ಬಹುಮಾನಗಳು

ಏಕೈಕ ಅಧಿಕೃತ ಮಾರಾಟಗಾರರು :

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್. ಲಾಟರಿ ವಿಭಾಗ

ಹರಿ ನಿವಾಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-52. ಫೋನ್ : 26713
ಶಾಖೆಗಳು : ಮುಂಬಯಿ, ಮದ್ರಾಸ್, ಹೊಸದಹಲಿ.

ASPIMSU/LD-4